# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.03/2026

Pw-01

Cw-02

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ಮುತ್ತಪ್ಪ ಮಡಿವಾಳರ |
| ತಂದೆಃಗಂಡನ ಹೆಸರುಃ | ಶ್ರೀ ಮಾರುತಿ |
| ವಯಸ್ಸುಃ | 25 ವರ್ಷ |
| ಉದ್ಯೋಗಃ | ವಾಟರ್ ಮನ್, ಹೆಸರೂರು ಗ್ರಾಮ ಪಂಚಾಯತಿ |
| ವಾಸ ಸ್ಥಳಃ | ಹೆಸರೂರು |

**ದಿನಾಂಕ:**06.04.2026 **ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಕಳೆದ 05 ವರ್ಷಗಳಿಂದ ಹೆಸರೂರು ಗ್ರಾಮ ಪಂಚಾಯತಿಯಲ್ಲಿ ವಾಟರ್ ಮನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ26.11.2025 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ನಾನು ಹೆಸರೂರು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ನೀರು ಬಿಡುವಾಗ ನಮ್ಮ ಪಿಡಿಒ ಫೋನ್ ಮಾಡಿ ಡಿವೈಎಸ್ಪಿ ರವರು ಪಿರ್ಯಾದಿ ಮನೆ ಹತ್ತಿರ ಸ್ಥಳ ಪಂಚನಾಮೆ ಮಾಡಲು ಬರುತ್ತಿದ್ದಾರೆ ನೀವು ಅಲ್ಲಿಗೆ ಹೋಗಿ ಸಹಕರಿಸಿ ಎಂದು ಹೇಳಿದರು. ಆಗ ನಾನು ಮತ್ತು ನಮ್ಮ ಗ್ರಾಮ ಪಂಚಾಯತಿ ಕಾರ್ಯದರ್ಶಿಯವರಾದ ಚಾಸಾ-3 ರವರು ಸೇರಿಕೊಂಡು ಪಿರ್ಯಾದಿ ಮನೆ ಹತ್ತಿರ ಹೋದೆವು. ಅಷ್ಟರಲ್ಲಿ ಡಿವೈಎಸ್‌ಪಿ ಮತ್ತು ಅವರ ಸಿಬ್ಬಂದಿಗಳು ಪಿರ್ಯಾದಿ ಮನೆ ಹತ್ತಿರ ಬಂದಿದ್ದರು.

2. ಪಿರ್ಯಾದಿ ಮನೆ ಹತ್ತಿರ ಡಿವೈಎಸ್ಪಿ ರವರು ಪಿರ್ಯಾದಿ ತೋರಿಸಿದ ಜಾಗವನ್ನು ಪರಿಶೀಲನೆ ಮಾಡಿ ಸ್ಥಳ ಪಂಚನಾಮೆ ಮಾಡಿ, ಫೋಟೋಗಳನ್ನು ತೆಗೆದುಕೊಂಡು ನಮ್ಮ ಸಹಿಗಳನ್ನು ತೆಗೆದುಕೊಂಡರು. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು, ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೋಲೀಸರು ತೆಗೆದ ಫೋಟೋವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

3. ನಂತರ ಪೊಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಚಾಸಾ-8- ಶ್ರೀಮತಿ ಲಲಿತಾ ರವರ ಮನೆ ಹತ್ತಿರ ಕರೆದುಕೊಂಡು ಹೋದರು. ಅಲ್ಲಿ ಚಾಸಾ-8 ರವರು ತೋರಿಸಿದ ಜಾಗದಲ್ಲಿ ಪೊಲೀಸರು ಪರಿಶೀಲನೆ ಮಾಡಿ ಮತ್ತೊಂದು ಸ್ಥಳ ಪಂಚನಾಮೆ ಮಾಡಿ, ಪೋಟೋವನ್ನು ತೆಗೆದುಕೊಂಡು ನಮ್ಮ ಸಹಿಗಳನ್ನು ತೆಗೆದುಕೊಂಡರು. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-3 ಎಂದು, ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪೋಲೀಸರು ತೆಗೆದ ಪೋಟೋವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎಂ.ಸಿ.ಹೆಚ್ ವಕೀಲರಿಂದಃ**

4. ಪೊಲೀಸರು ಬರೆದ ದಾಖಲಾತಿಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪೊಲೀಸರು ನಿಂತುಕೊಳ್ಳಿ ಎಂದು ಹೇಳಿದ್ದರಿಂದ ನಾವು ಪೋಟೋಗಳಿಗೆ ನಿಂತಿದ್ದೇವೆ ಎಂದರೆ ನಿಜ. ಪೊಲೀಸರು ಸ್ಥಳಕ್ಕೆ ಬಂದು ಹೋದ ಬಗ್ಗೆ ಅವರು ಸಹಿ ಮಾಡು ಎಂದಿದ್ದರಿಂದ ನಾವು ದಾಖಲಾತಿಗಳಿಗೆ ಸಹಿ ಮಾಡಿದ್ದೇವೆ ಎಂದರೆ ನಿಜ. ನನ್ನ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆಗಳನ್ನು ಮಾಡಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ಯಾವ ಕಾರಣಗಳಿಗಾಗಿ ಸ್ಥಳ ಪಂಚನಾಮೆಗಳನ್ನು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಸ್ಥಳ ಪಂಚನಾಮೆಗಳನ್ನು ಮಾಡಿದ ಸ್ಥಳಗಳ ಚಕ್ಕುಬಂಧಿಗಳು ನನಗೆ ಗೊತ್ತಿಲ್ಲ ಎಂದರೆ ನಿಜ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.